# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 699
2. ಸದಸ್ಯರ ಹೆಸರು : ಶ್ರೀ ಕೆ.ಟಿ.ಶ್ರೀಕಂಠೇಗೌಡ
3. ಉತ್ತರಿಸಬೇಕಾದ ದಿನಾಂಕ : 12-03-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕೊಪ್ಪ ಗ್ರಾಮದ ಕೆರೆಯ ಒಟ್ಟು ವಿಸ್ತೀರ್ಣ ಎಷ್ಟು; | ಕೊಪ್ಪ ಕೆರೆಯು 527 ಎಕರೆ ವಿಸ್ತೀರ್ಣವನ್ನು ಹೊಂದಿರುತ್ತದೆ. |
| ಆ | ಸದರಿ ಕೆರೆಯು ಎಷ್ಟು ಒತ್ತುವರಿಯಾಗಿದೆ; (ವಿವರ ನೀಡುವುದು) | ಕೆರೆಯ ಒತ್ತುವರಿ ವಿಸ್ತೀರ್ಣವನ್ನು ಅಂದಾಜಿಸಲು ಸರ್ವೆ ಕಾರ್ಯವನ್ನು ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದ್ದು, ಸರ್ವೆ ಕಾರ್ಯ ಮುಗಿದ ನಂತರ ಒತ್ತುವರಿಯನ್ನು ತೆರವುಗೊಳಿಸಲು ಸೂಕ್ತ ಕ್ರಮ ಜರುಗಿಸಲಾಗುವುದು. |
| ಇ | ಈ ಕೆರೆಯ ಒತ್ತುವರಿ ತೆರವುಗೊಳಿಸಿ ಹೂಳು ತೆಗೆಯಲು ಸರ್ಕಾರಕೈಗೊಂಡಿರುವ ಕ್ರಮಗಳೇನು; | 2018-19 ನೇ ಸಾಲಿನಲ್ಲಿ ಕೆರೆಯಲ್ಲಿನ ಭಾಗಶಃ ಹೂಳನ್ನು ಅಂದರೆ ಸುಮಾರು 93261.66 ಕ್ಯೂಬಿಕ್ ಮೀಟರ್‌ನಷ್ಟು ತೆಗೆಯಲಾಗಿರುತ್ತದೆ. |
| ಈ | ಒಟ್ಟಾರೆ ರಾಜ್ಯದಲ್ಲಿನ ಕೆರೆಗಳ ಒತ್ತುವರಿ ತೆರವಿಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ರಾಜ್ಯದಲ್ಲಿನ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ 1627 ಕೆರೆಗಳಿದ್ದು, ಅವುಗಳ ಪೈಕಿ 91 ಕೆರೆಗಳ ಸುಮಾರು 747 ಎಕರೆ ಒತ್ತುವರಿಯಾಗಿದ್ದು, 603 ಎಕರೆ ಒತ್ತುವರಿ ಪ್ರದೇಶವನ್ನು ತೆರವು ಮಾಡಲಾಗಿದೆ ಹಾಗೂ ಉಳಿದ ಒತ್ತುವರಿಯನ್ನು ತೆರವುಗೊಳಿಸಲು ಸೂಕ್ತ ಕ್ರಮ ಜರುಗಿಸಲಾಗುವುದು. |

*ಸಂಖ್ಯೆ:ಜಸಂಇ 44 ಎನ್‌ಎಲ್‌ಎ 2020*

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು